# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1208 (1363) |
| ಸದಸ್ಯರ ಹೆಸರು | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 16.03.2026 |
| ಉತ್ತರಿಸಬೇಕಾದ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಆಯುಷ್ ಇಲಾಖೆಯಲ್ಲಿ ಮಂಜೂರಾದ, ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು;</td><td>ಆಯುಷ್ ಇಲಾಖೆಯಲ್ಲಿ ಮಂಜೂರಾದ, ಭರ್ತಿಯಾದ ಹಾಗೂ ಖಾಲಿಯಿರುವ ಹುದ್ದೆಗಳ ವಿವರಗಳು ಈ ಕೆಳಕಂಡಂತಿವೆ.
<table>
<tr><th>ಕ್ರ. ಸಂ.</th><th>ವೃಂದ</th><th>ಮಂಜೂರು</th><th>ಭರ್ತಿ</th><th>ಖಾಲಿ</th></tr>
<tr><td>1</td><td>ಗ್ರೂಪ್-ಎ</td><td>1311</td><td>770</td><td>541</td></tr>
<tr><td>2</td><td>ಗ್ರೂಪ್-ಬಿ</td><td>203</td><td>92</td><td>111</td></tr>
<tr><td>3</td><td>ಗ್ರೂಪ್-ಸಿ</td><td>1324</td><td>525</td><td>799</td></tr>
<tr><td>4</td><td>ಗ್ರೂಪ್-ಡಿ</td><td>1923</td><td>259</td><td>1664</td></tr>
<tr><td colspan="2">ಒಟ್ಟು</td><td>4761</td><td>1546</td><td>3115</td></tr>
</table></td></tr>
<tr><td>ಆ)</td><td>ಆಯುಷ್ ಇಲಾಖೆಯಲ್ಲಿ ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ವಿಭಾಗದ ಔಷಧ ವಿತರಕರ ಒಟ್ಟು 267 ಹುದ್ದೆಗಳನ್ನು ರದ್ದುಗೊಳಿಸಿರುವುದು (ಆದೇಶ ಸಂಖ್ಯೆ: ಆಯುಷ್/148(2)/2018-19, ದಿನಾಂಕ:27.01.2021) ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಹುದ್ದೆಗಳನ್ನು ರದ್ದುಗೊಳಿಸಲು ಕಾರಣವೇನು;</td><td>ಬಂದಿದೆ.<br>ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಆಕುಕ 337 ಪಿಐಎಂ 1990, ದಿನಾಂಕ: 20.09.1999 ರಲ್ಲಿ ಸರ್ಕಾರಿ ಇಲಾಖೆಗಳಲ್ಲಿ ಸಿಬ್ಬಂದಿ ಸಂಖ್ಯೆಯನ್ನು ಶೇ 5 ರಷ್ಟನ್ನು ಕಡಿತಗೊಳಿಸುವ ನಿರ್ಧಾರದ ಹಿನ್ನೆಲೆಯಲ್ಲಿ 52 ಹುದ್ದೆಗಳನ್ನು, ಸರ್ಕಾರದ ಆದೇಶ ಸಂಖ್ಯೆ: ಆಕುಕ 15 ಪಸ್ಪೀರ 2001, ದಿನಾಂಕ:06.08.2001 ರಲ್ಲಿ ಮಾನ್ಯ ಮುಖ್ಯಮಂತ್ರಿಯವರು 2000-01 ನೇ ಸಾಲಿನ ಆಯವ್ಯಯ ಭಾಷಣದಲ್ಲಿ, ಸರ್ಕಾರದ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳಲ್ಲಿ ಶೇ.80 ರಷ್ಟು ಹುದ್ದೆಗಳನ್ನು ರದ್ದುಗೊಳಿಸಲಾಗುವುದೆಂದು ಘೋಷಿಸಲಾಗಿರುತ್ತದೆ. ಅಲ್ಲದೇ, ಮಧ್ಯಕಾಲಿನ ಆರ್ಥಿಕ ಯೋಜನೆಯ ಬಗ್ಗೆ ನಡೆಸಿದ ಚರ್ಚೆಯಲ್ಲಿ ಹುದ್ದೆಗಳ ರದ್ದತಿಯಲ್ಲಿ ಶಿಕ್ಷಣ, ಆರೋಗ್ಯ, ಪೊಲೀಸ್ ಮತ್ತು ಅರಣ್ಯ ಇಲಾಖೆಗಳಲ್ಲಿ ತಲಾ ಶೇ. 50 ರಷ್ಟು ಖಾಲಿ ಹುದ್ದೆಗಳನ್ನು ಉಳಿಸಿಕೊಂಡು ಉಳಿದ ಹುದ್ದೆಗಳನ್ನು ರದ್ದುಮಾಡಬೇಕೆಂದು ಸೂಚಿಸಿರುವ ಹಿನ್ನೆಲೆಯಲ್ಲಿ, 115 ಹುದ್ದೆಗಳನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ: ಆಕುಕ 235 ಪಿಐಎಂ 2002, ದಿನಾಂಕ: 26.02.2005 ರಲ್ಲಿ ಶೇ. 5 ಮತ್ತು 50 ರಷ್ಟು ಹುದ್ದೆಗಳನ್ನು ರದ್ದುಪಡಿಸುವ ಸಂಬಂಧವಾಗಿ 100 ಹುದ್ದೆಗಳು ಸೇರಿಸಿ, ಈ ಇಲಾಖೆಯಲ್ಲಿನ ಔಷಧ ವಿತರಕರ ವೃಂದದಲ್ಲಿ ಒಟ್ಟಾರೆ 267 ಹುದ್ದೆಗಳನ್ನು ರದ್ದುಗೊಳಿಸಿ ಆದೇಶಿಸಿದೆ.</td></tr>
</table>

. . .2

| | | |
|---|---|---|
| | | ಸದರಿ ಸರ್ಕಾರದ ಆದೇಶಗಳನ್ವಯ, ನಿರ್ದೇಶನಾಲಯದ ಆದೇಶ ಸಂಖ್ಯೆ: ಆಯುಷ್/148/ಸಿಬ್ಬಂದಿ(2)/2018-19, ದಿನಾಂಕ 21.07.2022 ರಲ್ಲಿ 267 ಔಷಧ ವಿತರಕರ ಹುದ್ದೆಗಳನ್ನು ರದ್ದುಪಡಿಸಿ ಆದೇಶ ಹೊರಡಿಸಿದೆ. |
| ಇ) | ಆಯುಷ್ ಚಿಕಿತ್ಸೆಗೆ ಜನ ಸಾಮಾನ್ಯರಿಂದ ಬೇಡಿಕೆ ಹೆಚ್ಚಾಗುತ್ತಿರುವ ಈ ಸಂದರ್ಭದಲ್ಲಿ ತುರ್ತು ಅಗತ್ಯವಿರುವ ಸ್ಥಳಗಳಲ್ಲಿ ಫಾರ್ಮಸಿ (Pharmacists) ಅಧಿಕಾರಿಗಳಿಲ್ಲದೆ ರೋಗಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು; | ಬಂದಿದೆ.<br>ಮುಂದುವರೆದು, ಆಯುಷ್ ಇಲಾಖೆಯಲ್ಲಿ ಫಾರ್ಮಸಿ ಅಧಿಕಾರಿಗಳ ವೃಂದದಲ್ಲಿ ಖಾಲಿ ಯಿರುವ 243 ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆಯು ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿದೆ. |
| ಈ) | ಆಯುಷ್ ಚಿಕಿತ್ಸಾಲಯಗಳಲ್ಲಿ ಫಾರ್ಮಸಿ ಅಧಿಕಾರಿಗಳಿಲ್ಲದೆ ರೋಗಿಗಳಿಗೆ ಸರಿಯಾದ ಚಿಕಿತ್ಸೆ ಸಿಗದೆ ಸಮಸ್ಯೆಯಾಗುತ್ತಿದ್ದು, ಸದರಿ ರದ್ದಾಗಿರುವ ಫಾರ್ಮಸಿ ಅಧಿಕಾರಿಗಳ ಹುದ್ದೆಗಳನ್ನು ಮರು ಸೃಜಿಸಲು (Post Re-creation) ಸರ್ಕಾರ ಕ್ರಮ ಕೈಗೊಳ್ಳುವುದೇ; ಒಂದು ವೇಳೆ ಕ್ರಮ ಕೈಗೊಳ್ಳುವುದಾದಲ್ಲಿ ಈ ಪ್ರಕ್ರಿಯೆ ಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು;<br>ಇಲ್ಲವಾದಲ್ಲಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ಪರಿಹರಿಸಲು ಸರ್ಕಾರ ಕೈಗೊಳ್ಳ ಬಹುದಾದ ಪರ್ಯಾಯ ಯೋಜನೆಗಳೇನು; | ಸರ್ಕಾರದ ಆದೇಶ ದಿನಾಂಕ: 20.09.1999, ಸರ್ಕಾರದ ಆದೇಶ ದಿನಾಂಕ: 06.08.2001 ಹಾಗೂ ಸರ್ಕಾರದ ಆದೇಶ ದಿನಾಂಕ: 26.02.2005 ರನ್ವಯ ರದ್ದುಪಡಿಸಿರುವ ಫಾರ್ಮಸಿ ಅಧಿಕಾರಿಗಳ ಹುದ್ದೆಗಳನ್ನು ಮರು-ಸೃಜಿಸಲು (Post Re-creation) ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.<br>ಮುಂದುವರೆದು, ಫಾರ್ಮಸಿ ಅಧಿಕಾರಿಗಳ ವೃಂದದಲ್ಲಿ ಖಾಲಿಯಿರುವ 243 ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |
| ಉ) | ಆರೋಗ್ಯ ಇಲಾಖೆಗೆ ಸಿಬ್ಬಂದಿ ಕಡಿತದಿಂದ ವಿನಾಯಿತಿ ನೀಡಬೇಕೆಂಬ ನಿಯಮವಿದ್ದರೂ ಸಹ ಆಯುಷ್ ಇಲಾಖೆಯಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯ ತಾಂತ್ರಿಕ ಹುದ್ದೆಗಳನ್ನು ರದ್ದುಪಡಿಸಲು ಬಲವಾದ ಕಾರಣಗಳೇನು? | ಉಪ ಪ್ರಶ್ನೆ (ಅ) ರಲ್ಲಿ ಉತ್ತರಿಸಲಾಗಿದೆ. |

**ಸಂಖ್ಯೆ: ಆಕುಕ 65 ಪಿಟಿಡಿ 2026**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.